

ಮಾನವೀಯತೆಯ ಬಗ್ಗೆ ಪದೇ ಪದೇ ಅಪನಂಬಿಕೆ ಉಂಟುಮಾಡುವಂತಹ ಸಂಗತಿಗಳಲ್ಲೊಂದು, ಆ್ಯಸಿಡ್ ಎರಚುವಿಕೆ. ಯಾರೋ ಒಬ್ಬರು ಮತ್ತೊಬ್ಬ ವ್ಯಕ್ತಿಯ ಮುಖವನ್ನು ಆ್ಯಸಿಡ್‌ನಿಂದ ಸುಡುತ್ತಾರೆ ಎಂದು ಕಲ್ಪಿಸಿಕೊಳ್ಳುವುದೇ ಅಸಹನೀಯ. ಆದರೆ, ಕುರೂಪಗೊಳಿಸುವ ಮೂಲಕ ಹೆಣ್ಣನ್ನು ಯಾತನೆಯ ಕೂಪಕ್ಕೆ ನೂಕುವ ಅಸಹನೀಯ ಕಲ್ಪನೆಗಳು ಮನುಕುಲದ ಚರಿತ್ರೆಯುದ್ದಕ್ಕೂ ಮತ್ತೆ ಮತ್ತೆ ನಿಜಗೊಳ್ಳುತ್ತಲೇ ಬಂದಿವೆ.

ರೇಷ್ಮಾ ಖುರೇಶಿ ಎನ್ನುವ ಹೆಣ್ಣುಮಗಳ ಕಥೆ ಕೇಳಿ. ಆ್ಯಸಿಡ್ ದಾಳಿಗೊಳಗಾದಾಗ ಆಕೆಗಿನ್ನೂ ಹದಿನೇಳರ ಹರಯ. ಅಕ್ಕನೊಂದಿಗೆ ರಸ್ತೆಯಲ್ಲಿ ನಡೆದುಹೋಗುವಾಗ, ಸೋದರ ಸಂಬಂಧಿಯೊಬ್ಬ ತನ್ನ ಗೆಳೆಯರೊಂದಿಗೆ ಸೇರಿಕೊಂಡು ಆ್ಯಸಿಡ್ ಎರಚಿದ. ಅಕ್ಕನಿಗೆ ಸಣ್ಣಪುಟ್ಟ ಗಾಯಗಳಾದವು. ಆದರೆ, ರೇಷ್ಮಾ ದಾರುಣವಾಗಿ ಗಾಯಗೊಂಡರು. ಒಂದು ಕಣ್ಣಿನ ದೃಷ್ಟಿ ಆಮ್ಲದ ತೀವ್ರತೆಯಲ್ಲಿ ಸೀದುಹೋಯಿತು.

ರೇಷ್ಮಾ ಅದೆಷ್ಟು ಮುಗ್ಧ ಹುಡುಗಿಯೆಂದರೆ, ವ್ಯಕ್ತಿಯೊಬ್ಬ ಮತ್ತೊಬ್ಬ ಮನುಷ್ಯನ ಮೇಲೆ ಹೀಗೆ ಆ್ಯಸಿಡ್ ಎರಚಬಹುದೆನ್ನುವ ಕಲ್ಪನೆಯೂ ಅವರಿಗಿರಲಿಲ್ಲ. ಘಟನೆ ನಡೆದ ನಂತರವೇ, ತನ್ನಂತಹ ನತದೃಷ್ಟರು ದೇಶದಲ್ಲಿ ಸಾಕಷ್ಟು ಮಂದಿಯಿದ್ದಾರೆ ಹಾಗೂ ದಿನದಿಂದ ದಿನಕ್ಕೆ ಅವರ ಸಂಖ್ಯೆ ಹೆಚ್ಚುತ್ತಿದೆ ಎನ್ನುವುದು ಅವರಿಗೆ ತಿಳಿದದ್ದು. ಮುಖವೇನೋ ಸುಟ್ಟುಹೋಯಿತು, ಆದರೆ ದೀರ್ಘ ಬದುಕು ಎದುರಿಗಿತ್ತು. ಸಾಮಾನ್ಯವಾಗಿ ಆ್ಯಸಿಡ್ ದಾಳಿಗೊಳಗಾದ ಹೆಣ್ಣುಮಕ್ಕಳು ಸೆರಗಿನ ಹಿಂದೆ ಮುಖವನ್ನು ಅವಿತಿಟ್ಟುಕೊಳ್ಳುತ್ತಾರೆ, ಬೆಳಕಿನಲ್ಲಿ ಕಾಣಿಸಿಕೊಳ್ಳಲು ಹಿಂಜರಿಯುತ್ತಾರೆ. ಆದರೆ, ಬದುಕನ್ನು ದಿಟ್ಟತನದಿಂದ ಎದುರಿಸಲು ರೇಷ್ಮಾ ನಿರ್ಧರಿಸಿದರು. ನೌಕರಿಯೊಂದನ್ನು ಪಡೆಯಲು ಪಟ್ಟ ಅವರ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ಉದ್ಯೋಗದಾತರು ಕೆಲಸ ಮಾಡುವ ಸಾಮರ್ಥ್ಯವನ್ನು ಅಳೆಯುವ ಬದಲು, ಮುಖದ ಅಂದವನ್ನು ಮಾನದಂಡವಾಗಿ ಪರಿಗಣಿಸತೊಡಗಿದರು. ಅಂದಗೇಡಿ ಮುಖದ ಹುಡುಗಿ ತಮ್ಮ ಕೆಲಸದ ಪರಿಸರಕ್ಕೆ ಹೊಂದುವುದಿಲ್ಲ ಎನ್ನುವುದು ಅವರ ಯೋಚನೆಯಾಗಿತ್ತು. ಕೊನೆಗೆ, ಆ್ಯಸಿಡ್ ದಾಳಿಗೊಳಗಾದವರ ಪುನರ್ವಸತಿಗೆ ಪ್ರಯತ್ನಿಸುವ ಹಾಗೂ ಸಂತ್ರಸ್ತರಿಗೆ ಕಾನೂನು ಬೆಂಬಲ ನೀಡುವ '**Make Love Not Scars**' ಎನ್ನುವ ದೆಹಲಿಯ ಸ್ವಯಂಸೇವಾ ಸಂಸ್ಥೆಯ ಜೊತೆ ಗುರ್ತಿಸಿಕೊಂಡರು; ತನ್ನಂತೆಯೇ ಮುಖ ಸುಟ್ಟುಕೊಂಡ ಹುಡುಗಿಯರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸದಲ್ಲಿ ತೊಡಗಿಕೊಂಡರು.

### ಆ್ಯಸಿಡ್ ಆಯುಧ

ಗಾಜಿನ ಸೀಸೆಯಲ್ಲಿ ತಣ್ಣಗೆ ಕಾಣಿಸುವ ಆ್ಯಸಿಡ್, ಸಮಾಜಘಾತುಕರ ಕೈಯಲ್ಲಿ ಆಯುಧದಂತೆ ಬಳಕೆಯಾಗುತ್ತದೆ. 'ಈ ಮಾರಣಾಂತಿಕ ದ್ರಾವಣ ಎಗ್ಗಿಲ್ಲದೆ ಬಳಕೆಯಾಗುವುದಕ್ಕೆ ಕಾನೂನಿನ ಲೋಪಗಳೂ ಕಾರಣ'

ಆ್ಯಸಿಡ್ ದಾಳಿ ಸಂತ್ರಸ್ತೆ, ಆ್ಯಸಿಡ್ ದಾಳಿ ವಿರೋಧಿ ಕಾರ್ಯಕರ್ತೆ, ರೂಪದರ್ಶಿ ಎಲ್ಲವೂ ಆಗಿರುವ ರೇಷ್ಮಾ ಖುರೇಷಿ. ತನ್ನ ವಸ್ತ್ರ ವಿನ್ಯಾಸಕಿ ಜಹೀನಾ ಜೊತೆಗಿರುವ ಈ ಫೋಟೊ ಮೈಸೂರಿನಲ್ಲಿ ನಡೆದ 'ಫ್ಯಾಷನ್ ವೀಕ್' ಸಂದರ್ಭದ್ದು.